ಅ) ಬೆಳಗಾವಿ ಜಿಲ್ಲೆ ಚಿಕ್ಕೋಡಿ ಪಟ್ಟಣದಲ್ಲಿರುವ ಸಾರ್ವಜನಿಕ ಆಸ್ಪತ್ರೆಯಲ್ಲಿ ನಾಯಿ ಕಡಿತಕ್ಕೆ ಲಸಿಕೆ ದೊರೆಯದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಕೊರತೆಯನ್ನು ನೀಗಲು ಸರ್ಕಾರವು ಕೈಗೊಳ್ಳುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಎಸ್. ಎಸ್. ಭೀಮಣ್ಣನವರು : ಮಾನ್ಯ ಅಧ್ಯಕ್ಷರೇ, ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಪಟ್ಟಣದಲ್ಲಿರುವ ಸಾರ್ವಜನಿಕ ಆಸ್ಪತ್ರೆಯಲ್ಲಿ ನಾಯಿ ಕಡಿತಕ್ಕೆ ಲಸಿಕೆ ದೊರೆಯದಿರುವುದು, ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದರೆ, ಸರಕಾರದ ಗಮನಕ್ಕೆ ಬಂದಿಲ್ಲ ಎಂದು ಉತ್ತರ ಇದೆ. ಹಾಗಿದ್ದಲ್ಲಿ ಈ ಕೊರತೆಯನ್ನು ನೀಗಲು ಸರ್ಕಾರವು ಕೈಗೊಳ್ಳುವ ಕ್ರಮಗಳೇನು ಎಂದು ಕೇಳಿದ್ದಕ್ಕೆ ಏನೂ ಉದ್ಭವಿಸುವುದಿಲ್ಲ ಎಂದು ಇದೆ. ಈ ಔಷಧಿ ಹಳ್ಳಿಗಳಲ್ಲಿ ಸಿಗಬೇಕಾದದ್ದು ಬಹಳ ಮುಖ್ಯ. ಬೆಳಗಾವಿ, ಬೆಂಗಳೂರಿನಲ್ಲಿ ಹುಚ್ಚುನಾಯಿಗಳು ಸಿಕ್ಕುವುದಿಲ್ಲ. ಹಳ್ಳಿಗಳಲ್ಲಿ ಇರುತ್ತವೆ. ತಾಲ್ಲೂಕುಗಳಲ್ಲಿ ಈ ಲಸಿಕೆ ಸಿಗದೆ ಹೋದರೆ ಜನರು ಬೆಳಗಾವಿ ಜಿಲ್ಲೆಗೆ ಸುಮಾರು 100 ಕಿ.ಮಿ. ಬಂದು 14 ಇಂಜೆಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ. ಈ ಲಸಿಕೆ ಸಿಗುತ್ತದೆಯೋ ಇಲ್ಲವೋ ಇದಕ್ಕೆ ಏನಾದರೂ ಏರ್ಪಾಡು ಮಾಡುತ್ತೀರಾ, ತಾವು ಸರಿಯಾದಂತಹ ಉತ್ತರವನ್ನು ಕೊಡಬೇಕು.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, ಚಿಕ್ಕೋಡಿ ಆಸ್ಪತ್ರೆಯಲ್ಲಿ ನಾವು ಲಸಿಕೆಗಳನ್ನು ಒದಗಿಸಿದ್ದೇವೆ. ಬೆಳಗಾಂನಲ್ಲಿ ಈ ಲಸಿಕೆಯನ್ನು ಮ್ಯಾನ್ಯುಫ್ಯಾಕ್ಚರ್ ಮಾಡುತ್ತಾರೆ. ನನಗೆ ಮಾಹಿತಿ ಕೊಟ್ಟ ಹಾಗೆ 1991-92 ರಲ್ಲಿ ಸರಾಸರಿ 12 ವಯಲ್ಸ್ ಪ್ರಕಾರ ಚಿಕ್ಕೋಡಿ ಆಸ್ಪತ್ರೆಗೆ ಕೊಟ್ಟಿದ್ದಾರೆ. ಜನವರಿ - ಫೆಬ್ರವರಿಯಲ್ಲೂ 12 ವಯಲ್ಸ್ ಕೊಟ್ಟಿದ್ದಾರೆ.

<u>ವಿಷಯ : ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರುಗಳ ಹುದ್ದೆಗಳ ಭರ್ತಿ.</u>

357

ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಎಷ್ಟು ಹುದ್ದೆಗಳು ಖಾಲಿ ಇದೆ?

ಆ) ಕೋಲಾರ ಜಿಲ್ಲೆಯಲ್ಲಿ ಎಷ್ಟು ಶಿಕ್ಷಕರ ಹುದ್ದೆಗಳು ಖಾಲಿ ಇವೆ ; ಹಾಗೂ ಅವುಗಳನ್ನು ಇನ್ನು ಎಷ್ಟು ದಿವಸಗಳಲ್ಲಿ ಭರ್ತಿ ಮಾಡಲಾಗುವುದು?

ಇ) ರಾಜ್ಯದಲ್ಲಿ 1992-93 ನೇ ಸಾಲಿನಲ್ಲಿ ಎಷ್ಟು ಮಾಧ್ಯಮಿಕ, ಪ್ರೌಢಶಾಲೆಗೆ ಅನುಮತಿ ನೀಡಲಾಗಿದೆ?

ಈ) ಸದರೀ ಪ್ರೌಢ ಶಾಲೆಗಳನ್ನು ನಡೆಸುವ ವಿದ್ಯಾಸಂಸ್ಥೆಗಳು ವ್ಯಾಪಾರಿ ಮನೋಭಾವನೆ

ತಾಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಅಂತಹವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗುವುದು?

ಡಾ॥ ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) 13,149

ಆ) ಕೋಲಾರ ಜಿಲ್ಲೆಯಲ್ಲಿ 663 ಹುದ್ದೆಗಳು ಖಾಲಿ ಇದ್ದು, ಇವುಗಳನ್ನು ವಿಶೇಷ ನೇಮಕಾತಿ ಮತ್ತು ಸಾಮಾನ್ಯ ನೇಮಕಾತಿ ನಿಯಮಗಳನ್ವಯ ಆದಷ್ಟು ಬೇಗನೆ ಭರ್ತಿ ಮಾಡಲಾಗುವುದು.

ಇ)

1.	ಖಾಸಗಿ ಪ್ರೌಢ ಶಾಲೆಗಳು	-	818	
2.	ಸರ್ಕಾರಿ ಪ್ರೌಢ ಶಾಲೆಗಳು	-	148	
	ಒಟ್ಟು	-	966	ಶಾಲೆಗಳಿಗೆ ಅನುಮತಿ ನೀಡಲಾಗಿದೆ.

ಈ) ಬಂದಿರುವುದಿಲ್ಲ.

ಉ) (ಈ) ನಲ್ಲಿ ಉತ್ತರಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ. ವಿ. ವೆಂಕಟಪ್ಪ : ಸ್ವಾಮಿ, ತಮ್ಮ ಉತ್ತರದಲ್ಲಿ 13,149 ಶಿಕ್ಷಕರ ಹುದ್ದೆ ಖಾಲಿ ಇವೆ ಎಂದು ಹೇಳಿದ್ದೀರಿ. ಆಟ್ ಲೀಸ್ಟ್ ಜೂನ್ ಮೊದಲ ವಾರದೊಳಗೆ ಅಥವ ಮುಂದೆ ಅಕೆಡೆಮಿಕ್ ಇಯರ್ ಪ್ರಾರಂಭವಾಗುವುದರೊಳಗೆ ನೀವು ಎಷ್ಟು ಹುದ್ದೆಗಳನ್ನು ಭರ್ತಿ ಮಾಡುತ್ತೀರಿ? ರೂರಲ್ ಏರಿಯಾದಿಂದ ಬರತಕ್ಕ ಅಭ್ಯರ್ಥಿಗಳಿಗೆ 15 ಪರ್‌ಸೆಂಟ್ ರಿಸರ್‌ವೇಷನ್‌ಗೆ ಬದಲಾಗಿ 15 ಮಾರ್ಕ್ಸ್ ಕೊಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಗ್ರಾಮಿಣ ಪ್ರದೇಶದವರಿಗೆ ಯಾವ ರೀತಿ ಅನುಕೂಲ ಮಾಡುತ್ತೀರಿ? ಇದಕ್ಕೆ ಉತ್ತರ ಹೇಳಬೇಕು?

ಡಾ॥ ಹೆಗ್ಗಪ್ಪ ಡಿ. ಲಮಾಣಿ : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಹೇಳಿದ ಹಾಗೆ ನಾಳೆ ಮಾರ್ಚ್ ಅಥ'ವ ಏಪ್ರಿಲ್, ಮೇ ತಿಂಗಳೊಳಗಾಗಿ, ಈ ಶೈಕ್ಷಣಿಕ ವರ್ಷ ಪ್ರಾರಂಭವಾಗುವುದಕ್ಕಿಂತ ಮೊದಲು ಶಿಕ್ಷಕರನ್ನು ತುಂಬುವ ಒಂದು ವ್ಯವಸ್ಥೆಯನ್ನು ನಾವು ನಿಶ್ಚಿತವಾಗಿ ಮಾಡುತ್ತೇವೆ, ಅದನ್ನು ತಾವು ನೋಡಬಹುದು. ಇನ್ನು 15 ಪರ್‌ಸೆಂಟ್ ಬಗ್ಗೆ ಹೇಳಿದರು. ಸನ್ಮಾನ್ಯ ಅಧ್ಯಕ್ಷರೇ, ಇದು 15 ಪರ್‌ಸೆಂಟ್ ಅಲ್ಲ, ಅಭ್ಯರ್ಥಿಯ ಗ್ರಾಜ್ಯುಯೇಟ್ ಲೆವಲ್‌ನಲ್ಲಿ, ಎಸ್.ಎಸ್.ಎಲ್. ಸಿ. ಅಥವ ಪಿ.ಯು.ಸಿ. ಲೆವಲ್‌ನಲ್ಲಿ ಏನು ಟೋಟಲ್ ಮಾರ್ಕ್ಸ್ ಇದೆ, ಆ ಟೋಟಲ್ ಮಾರ್ಕ್ಸ್‌ನಲ್ಲಿ 15 ಮಾರ್ಕ್ಸ್‌ಗಳನ್ನು ಕೂಡಿಸಿ ಅದರ ಪರ್‌ಸೆಂಟ್ ತೆಗೆಯತಕ್ಕಂತದ್ದು. ಆದರಲ್ಲಿ ಕೆಲವು ಜನರಿಗೆ ಬಹಳ ತಪ್ಪು ಕಲ್ಪನೆ ಆಗಿದೆ. 15 ಪರ್‌ಸೆಂಟ್ ಕೊಟ್ಟು ಬಿಟ್ಟರೆ ಅವರಿಗೆ 700 ಅಥವ 800 ಮಾರ್ಕ್ಸ್‌ಗಳು ಇದ್ದಾಗ ಅಷ್ಟು ಮಾರ್ಕ್ಸ್ ಹೆಚ್ಚಾಗುತ್ತದೆ. ಸುಮಾರು 90-105 ಮಾರ್ಕ್ಸ್‌ಗಳು ಹೆಚ್ಚುತ್ತವೆ. ಈ ರೀತಿ 15 ಪರ್‌ಸೆಂಟ್ ಕೂಡಿಸುವುದರಿಂದ ಪಟ್ಟಣದವರಿಗೆ ಇದರಲ್ಲಿ ಅನ್ಯಾಯ ಆಗುತ್ತದೆ ಎನ್ನುವ ಕೂಗು ಬಂದ್ದಿದ್ದರಿಂದ 15 ಮಾರ್ಕ್ಸ್‌ಗಳಿಗೆ ಇದನ್ನು ನಿಶ್ಚಿತಗೊಳಿಸಿದ್ದೇವೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮೊದಲು 15 ಪರ್‌ಸೆಂಟ್ ಎಂದು ಮಾಡಿ ಈಗ 15 ಮಾರ್ಕ್ಸ್‌ಗಳು ಮಾಡಿರುವುದು ಅನ್ಯಾಯವಾಗುತ್ತಿದೆ.

(ಗೊಂದಲ)

ಶ್ರೀ ಜೆ. ಸಿ. ಮಾಧುಸ್ವಾಮಿ : ಗ್ರಾಮಾಣ ವಿದ್ಯಾರ್ಥಿಗಳಿಗೆ ಹಿಂದೆ 15 ಪರ್‌ಸೆಂಟ್ ಕೊಡುತ್ತಿದ್ದು ಅದನ್ನೇ ಹಾಗೆ ಮುಂದುವರಿಸಬೇಕು.

ಡಾ॥ ಹೆಗ್ಗಪ್ಪ ಡಿ. ಲಮಾಣಿ : ಸನ್ಮಾನ್ಯ ಅಧ್ಯಕ್ಷರೇ, ನಾವು 15 ಮಾರ್ಕ್ಸ್‌ಗಳನ್ನು ಕೂಡಿಸಬೇಕು ಎಂದು ಒಂದು ನಿರ್ಣಯ ತೆಗೆದುಕೊಂಡಿದ್ದೇವೆ. ಆದರೆ ಸನ್ಮಾನ್ಯ ಸದಸ್ಯರ ಅಭಿಪ್ರಾಯ ಜನರ ಒಂದು ಆಸೆ 15 ಪರ್‌ಸೆಂಟ್ ಇರಬೇಕೆಂದು ಹೇಳುತ್ತಿದ್ದಾರೆ. ನಾವು ಇದನ್ನು ಪರಿಶೀಲಿಸುತ್ತೇವೆ.

(ಗೊಂದಲ)

ಶ್ರೀ ಎಂ. ವಿ. ವೆಂಕಟಪ್ಪ : ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲೆಯಲ್ಲಿ ಸುಮಾರು 663 ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದೀರಿ. ಅದರಲ್ಲಿ ನಮ್ಮ ತಾಲ್ಲೂಕಿನಲ್ಲಿ 150 ಅಂದರೆ ನಾಲ್ಕನೇ ಒಂದು ಭಾಗ ಇದೆ ಅದನ್ನು ಆಟ್‌ಲೀಸ್ಟ್ ಜೂನ್ ಫಸ್ಟ್ ಒಳಗಾದರೂ ಭರ್ತಿ ಮಾಡಿಕೊಡುತ್ತೀರ ಸ್ವಾಮಿ.

ಡಾ॥ ಹೆಗ್ಗಪ್ಪ ಡಿ. ಲಮಾಣಿ : ಅವನ್ನು ಭರ್ತಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ವಿಷಯ : ಪ್ರಾಥಮಿಕ ಆರೋಗ್ಯ ಕೇಂದ್ರ, ಘಟಕಗಳಿಗೆ ಔಷಧಿಗಳ ಸರಬರಾಜಿನ ಪ್ರಮಾಣ.

260

ಶ್ರೀ ಕೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಸರಬರಾಜು ಮಾಡುವ ಔಷಧಿಗಳ ಪ್ರಮಾಣ ಹಾಗೂ ಮೊತ್ತವೇನು?

ಆ) ಸದರಿ ಔಷಧಿಗಳನ್ನು ಸರಬರಾಜು ಮಾಡಲು ಅನುಸರಿಸುತ್ತಿರುವ ನೀತಿ ಏನು? ಹಾಗೂ ಸರ್ಕಾರದ ವತಿಯಿಂದ ಸರಬರಾಜು ಮಾಡುವ ವ್ಯವಸ್ಥೆ ಏನು?

ಇ) 1992-93 ರಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹಾಗೂ ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಔಷಧಿಯನ್ನು ನಿಗಧಿತ ಪ್ರಮಾಣದಲ್ಲಿ ಸರಬರಾಜು ಮಾಡಲಾಗಿದೆಯೇ?

ಈ) ಕುಟುಂಬ ಕಲ್ಯಾಣ ಶಸ್ತ್ರ ಚಿಕಿತ್ಸೆಗೆ ಪ್ರತಿ ವ್ಯಕ್ತಿಗೆ ಕೊಡುವ ಮೊತ್ತ ಹಾಗೂ ಕಾಲ ಕಾಲಕ್ಕೆ ಸರಿಯಾಗಿ ಕೊಡಲಾಗಿದೆಯೇ? ಹಾಗೂ ಸದರಿ ಮೊತ್ತ ಸಾಕಾಗಿದೆಯೇ?

ಉ) ಔಷಧಿಯ ಹಾಗೂ ಉಪಯೋಗವಾಗುವ ವಸ್ತುಗಳ ಬದಲು ಹಣಕೊಡುವುದು ಹಣ ದುರುಪಯೋಗಕ್ಕೆ ಅವಕಾಶ ಮಾಡಿ ಕೊಟ್ಟಂತಲ್ಲವೇ?